**ಕರ್ನಾಟಕ ವಿಧಾನ ಪರಿಷತ್ತು**
**ಸರ್ಕಾರಿ ಭರವಸೆಗಳ ಸಮಿತಿ**
**ಉನ್ನತ ಶಿಕ್ಷಣ ಇಲಾಖೆಯ ಭರವಸೆಗಳ ಪಟ್ಟಿ**

(ಹಿಂದಿನ ಸಭೆ ನಡೆದ ದಿನಾಂಕ: 16.01.2024)

| ಕ್ರಮ ಸಂಖ್ಯೆ | ಆಶ್ವಾಸನ ಸಂಖ್ಯೆ | ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ |
|---|---|---|---|---|
| 1 | **6506** | ಚು.ಗು.ಪ್ರ : 270<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿಪನದಿ: 03.03.2016 | ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆಗಳನ್ನು ತುಂಬುವ ಬಗ್ಗೆ. | ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಬೇಕಾಗಿದ್ದು ಪರಿಶೀಲನೆಯಲ್ಲಿದೆಯೆಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. |
| 2 | **6254** | ಚು.ಗು.ಪ್ರ: 395+390 (ಉ.ಪ್ರ)<br>ಶ್ರೀ ಎಂ ನಾರಾಯಣಸ್ವಾಮಿ<br>ವಿಪನದಿ: 10.02.2017 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಸಚಿವರು ಅವರ ಕಾಲದಲ್ಲಿ ನಡೆದ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರದ ಕುರಿತು ಕೂಡಲೇ ಕ್ರಮವನ್ನು ಜರುಗಿಸುವ ಬಗ್ಗೆ | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳ ಮೇಲೆ ಸಾಕಷ್ಟು ಅವ್ಯವಹಾರಗಳ ಆರೋಪಗಳು ಬಂದಿರುವುದು ಎಲ್ಲರಿಗೂ ಗೊತ್ತಿದೆ. ಮಾನ್ಯ ರಾಜ್ಯಪಾಲರು ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಅವರ ಮೇಲೆ ತನಿಖೆ ನಡೆಸಲು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದಂತಹ ಶ್ರೀ ಕೇಶವಮೂರ್ತಿಯವರನ್ನು ನೇಮಿಸಿ, ಅವರಿಂದ ತನಿಖಾ ವರದಿಯನ್ನು ಸರ್ಕಾರ ಪಡೆದು, ಅದಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸಿ, ಸದರಿ ವರದಿಯನ್ನು ಕಾನೂನು ಇಲಾಖೆಗೆ ಕಳುಹಿಸಲಾಗಿದೆ. ಈಗ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000 ರೀತ್ಯಾ ಇದರ ಮೇಲೆ ಕುಲಪತಿಗಳಾದ ರಾಜ್ಯಪಾಲರ ಕ್ರಮವನ್ನು ಜರುಗಿಸಬೇಕಾಗುತ್ತದೆ. ಆದಕಾರಣ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು ನಂತರ ಕಡತವನ್ನು ರಾಜ್ಯಪಾಲರಿಗೆ ಮಂಡಿಸಿ ಅವರ ಮೇಲೆ ಸರ್ಕಾರ ಸೂಕ್ತ ಕ್ರಮಕೈಗೊಳ್ಳುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. |
| 3 | **6232** | ಚು.ಗು.ಪ್ರ : 4877<br>ಶ್ರೀ ರಮೇಶ್ ಬಾಬು<br>ವಿಪನದಿ: 24-11-2017 | ಬೆಂಗಳೂರು ವಿಶ್ವವಿದ್ಯಾನಿಲಯದ ಡಾ॥ ಆರ್.ಕೆ. ಸೋಮಶೇಖರ್ ವಿರುದ್ಧ ಅಂಕಪಟ್ಟಿಯ ಹಗರಣದ ಕುರಿತು ನೇಮಕ ಆಗಿದ್ದ ನ್ಯಾಯಾಂಗ ತನಿಖೆಯ | ಅಂಕಪಟ್ಟಿಯ ಹಗರಣದ ಸಂಬಂಧದಲ್ಲಿ ಡಾ॥ ಆರ್.ಕೆ. ಸೋಮಶೇಖರ್ ಇವರ ವಿರುದ್ಧ ಮಾಡಲಾದ ಆರೋಪಗಳ ಕುರಿತು ತನಿಖೆ ನಡೆಸಲು ಶ್ರೀ ವಸಂತ್. ಹೆಚ್ ಮುಳಸಾವಳಗಿ, ನಿವೃತ್ತ ನ್ಯಾಯಾಧೀಶರು ಇವರನ್ನು |

| | | | | |
|---|---|---|---|---|
| | | | ವರದಿ ಹಾಗೂ ಕ್ರಮ ಕೈಗೊಂಡಿರುವ ಬಗ್ಗೆ. | ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.<br>ಸರ್ಕಾರದ ಈ ಕ್ರಮವನ್ನು ಆಕ್ಷೇಪಿಸಿ ಡಾ॥ ಆರ್.ಕೆ. ಸೋಮಶೇಖರ್, ಪ್ರಾಧ್ಯಾಪಕರು ಹಾಗೂ ಹಿಂದಿನ ಕುಲಸಚಿವರು (ಮೌಲ್ಯಮಾಪನ) ಇವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 3005/2017ರ ಪ್ರಕರಣದಲ್ಲಿ ಶ್ರೀ ವಸಂತ್ ಹೆಚ್ ಮುಳಸಾವಳಗಿ, ನಿವೃತ್ತ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿರುವ ಆದೇಶಕ್ಕೆ ತಡೆಯಾಜ್ಞೆ ನೀಡಲಾಗಿದೆ. ತಡೆಯಾಜ್ಞೆಯನ್ನು ತೆರವುಗೊಳಸಲು ಸರ್ಕಾರದ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. |
| 4 | **6812** | ಚು.ಗು.ಪ್ರ : 431<br>ಶ್ರೀ ಅರುಣ ಶಹಾಪುರ<br>ವಿಪನದಿ: 09.02.2018 | ಕಾಲ್ಪನಿಕ ವೇತನ ಬಡ್ತಿ ಜಾರಿಗೊಳಸುವುದರಲ್ಲಿ ಸರ್ಕಾರದ ಸ್ಪಷ್ಟ ನಿಲುವಿನ ಬಗ್ಗೆ. | ಕಾಲ್ಪನಿಕ ವೇತನ ನಿಗಧೀಕರಣದ ವಿಷಯವನ್ನು ಪರಿಶೀಲಿಸಲು ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಇವರ ಅಧ್ಯಕ್ಷತೆಯಲ್ಲಿ ಈ ಹಿಂದೆ ರಚಿಸಲಾಗಿದ್ದ ಸದನದ ವಿಶೇಷ ಸಮಿತಿಯನ್ನು ಪುನರುಜ್ಜೀವನಗೊಳಿಸಿ ವರದಿಯನ್ನು ನೀಡುವಂತೆ ಕೋರಲು ಉನ್ನತ ಶಿಕ್ಷಣ ಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 15.06.2017 ರಂದು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳೊಂದಿಗೆ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆ ಕರ್ನಾಟಕ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯ ವರದಿಯನ್ನು ದಿನಾಂಕ:06.02.2018ರಂದು ಸದನಕ್ಕೆ ಒಪ್ಪಿಸಿದೆ. ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ ಸರ್ಕಾರ ಸ್ಪಷ್ಟ ನಿಲುವನ್ನು ತೆಗೆದುಕೊಳ್ಳುತ್ತದೆಯೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. |
| 5 | **6815** | ಚು.ಗು.ಪ್ರ.: 390<br>ಶ್ರೀ ರಮೇಶ್ ಬಾಬು<br>ವಿ.ಪ.ನ.ದಿ: 09.02.2018 | ರಾಜ್ಯದ ಬಿ.ಎಡ್. ಕಾಲೇಜುಗಳ ಪ್ರವೇಶಕ್ಕೆ ನಿಗದಿಪಡಿಸಿರುವ ಶುಲ್ಕ ಪರಿಷ್ಕರಿಸುವ ಪ್ರಸ್ತಾವನೆ ಬಗ್ಗೆ. | ಪ್ರಸ್ತುತ ಶುಲ್ಕ ಪರಿಷ್ಕರಣೆ ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆಯೇಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು |
| 6 | **7093** | ಚು.ರ.ಪ್ರ: 501<br>ಶ್ರೀ ಟಿ.ಎ.ಶರವಣ | ಪ್ರಸ್ತುತ ರಾಜ್ಯದಲ್ಲಿನ ವಿಶ್ವವಿದ್ಯಾಲಯ ಅಧ್ಯಯನ ಪೀಠಗಳು ಕಾಲಕಾಲಕ್ಕೆ | ವಿಶ್ವವಿದ್ಯಾಲಯಗಳು ರಚಿಸಿಕೊಂಡಿರುವ ಪರಿನಿಯಮಗಳನ್ವಯ ಅಧ್ಯಯನ ಪೀಠಗಳು ಸಂಶೋಧನೆ |

| | | | | |
|---|---|---|---|---|
| | | ವಿ.ಪ.ನ.ದಿ: 13.12.2018 | ಸರಿಯಾಗಿ ನಡೆಸಬೇಕಾದ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವ ಕುರಿತು ಹಾಗೂ ಪ್ರತಿ ವರ್ಷವೂ ಬಳಕೆ ಮಾಡಿದ ಅನುದಾನಕ್ಕೆ ವಿಶ್ವವಿದ್ಯಾಲಯ ಅಧ್ಯಯನದ ಪೀಠಗಳು ಲೆಕ್ಕಪತ್ರಗಳ ನಿರ್ವಹಣೆಯ ಪುನರಾವಲೋಕನ ಕಾರ್ಯದ ಬಗ್ಗೆ. | ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಬೇಕಾಗಿರುತ್ತದೆ ಹಾಗೂ ಅಧ್ಯಯನ ಪೀಠಗಳ ಅನುದಾನ ಮತ್ತು ಖರ್ಚು ವೆಚ್ಚಗಳ ಲೆಕ್ಕಪತ್ರಗಳನ್ನು ವಿಶ್ವವಿದ್ಯಾಲಯಗಳ ಹಣಕಾಸು ವಿಭಾಗಗಳಿಂದ ನಿರ್ವಹಣೆ ಮಾಡಲಾಗುತ್ತದೆ.<br><br>ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸಲಾಗಿರುವ ಅಧ್ಯಯನ ಪೀಠಗಳ ಕಾರ್ಯಚಟುವಟಿಕೆಗಳು ಹಾಗೂ ಅನುದಾನ ನಿರ್ವಹಣೆ ಕುರಿತು ವಿಶ್ವವಿದ್ಯಾಲಯ ಪುನರಾವಲೋಕನ ಆಯೋಗದಿಂದ ಪರಿಶೀಲನೆ ನಡೆಸಿ, ವರದಿಯನ್ನು ಪಡೆಯಲಾಗಿದ್ದು, ಪ್ರಸ್ತುತ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. |
| 7 | **7103** | ಚು.ಗು.ಪ್ರ: 1047(1112)<br>ಶ್ರೀ ಪ್ರದೀಪ್ ಶೆಟ್ಟರ್<br>ವಿ.ಪ.ನ.ದಿ: 20.12.2018 | 2017-18, 2018-19ನೇ ಸಾಲಿನಲ್ಲಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಬಳಕೆ ಮಾಡುವ ಬಗ್ಗೆ | ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಒದಗಿಸುವ ಅನುದಾನವನ್ನು ರಾಜ್ಯ ಅನುಸೂಚಿತ ಜಾತಿಗಳು/ಅನೂಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದನೆ ನೀಡಲಾಗಿರುವ ಕಾರ್ಯಕ್ರಮ/ಯೋಜನೆಗಳಿಗೆ ಬಳಸಲು ಹಾಗೂ ಅಭಿವೃದ್ಧಿ ಅನುದಾನವನ್ನು ಆಯವ್ಯಯದಲ್ಲಿನ ಯೋಜನಾ ಕಾರ್ಯಕ್ರಮದಡಿಯಲ್ಲಿಯ ಮುಂದುವರಿಕೆ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯದ ಪ್ರಚಲಿತ ಯೋಜನೆಗಳನ್ನು/ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ವಿಧಿಸುವ ಮಾನದಂಡಗಳು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿನಿಯಮ, ಕೆ.ಎಫ್.ಸಿ. ನಿಯಮಗಳು ಮತ್ತು ಲೆಕ್ಕ ಪರಿಶೋಧನೆಯ ಮಾನದಂಡಗಳನ್ನು ಅನುಸರಿಸಿ ಬಳಕೆ ಮಾಡಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. |
| 8 | **7416** | ಚು.ರ.ಪ್ರ.: 25<br>ಶ್ರೀ ಎನ್. ರವಿಕುಮಾರ್<br>ವಿಪನದಿ: 16.07.2019 | ಮಂಗಳೂರು ವಿಶ್ವವಿದ್ಯಾಲಯದಲ್ಲಿ 2014 ರಿಂದ ನಡೆದಿರುವ ರೂ. 100 ಕೋಟಿ ಮೊತ್ತದ ಹಗರಣಗಳ ಕುರಿತು. | ವಿಶೇಷ ಆಡಿಟ್ ತಂಡ ರಚಿಸಿ, ಹಗರಣಗಳ ಲೆಕ್ಕ ತನಿಖೆಗೆ ಕಾರ್ಯಕ್ರಮ ರೂಪಿಸಿ ಸೆಪ್ಟೆಂಬರ್-2019ರ ಮಾಹೆಯಲ್ಲಿ ಕಾರ್ಯಾರಂಭ ಮಾಡಲು ಕ್ರಮ ವಹಿಸಲಾಗುವುದು. ಈ ಅಕ್ರಮಗಳ ಕುರಿತು ಆಡಿಟ್ ವರದಿ ಸಲ್ಲಿಸಲು ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಪರೀಕ್ಷಾ |

| | | | | |
|---|---|---|---|---|
| | | | | ನಿರ್ವಹಣಾ ಗುತ್ತಿಗೆ, ಸೋಲಾರ್ ಉಪಕರಣಗಳು ಮತ್ತು ಕಂಪ್ಯೂಟರ್ ಖರೀದಿ, ಸಿ.ಸಿ.ಟಿವಿಗಳ ಖರೀದಿ, ಅಕ್ರಮ ನೇಮಕಾತಿಗಳ ಕುರಿತು ನಿಗದಿತ ಆರೋಪಗಳ ಬಗ್ಗೆ ಆಡಿಟ್ ಮಾಡಿಸಲು ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು, ಇವರಿಗೆ ತಿಳಿಸಲಾಗಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. |
| 9 | **7418** | ಚು.ರ.ಪ್ರ :485<br>ಶ್ರೀ ನಿರಾಣಿ ಹಣಮಂತ್ ರುದ್ರಪ್ಪ<br>ವಿ.ಪ.ನ.ದಿ: 23.07.2019 | ವಿಜಯಪುರದಲ್ಲಿರುವ ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಒಟ್ಟು ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವ ಬಗ್ಗೆ. | ತಡೆಯಾಜ್ಞೆಯಿರುವುದರಿಂದ (ರಿಟ್ ಅರ್ಜಿ ಸಂಖ್ಯೆ:202064/2019) ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ನ್ಯಾಯಾಲಯದ ತಡೆಯಾಜ್ಞೆಯು ತೆರವಾದ ನಂತರ ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲಾಗುವುದು.<br><br>ಸದರಿ ಅಭಿವೃದ್ಧಿ ಯೋಜನೆಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. |
| 10 | 7690 | ಶೂನ್ಯ ವೇಳೆಯಲ್ಲಿ<br>ಶ್ರೀ ಮರಿತಿಬ್ಬೇಗೌಡ<br>ವಿ.ಪ.ನ.ದಿ:24.03.2020 | ಡಿಪ್ಲೋಮಾ ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯಮಾಪಕರ ಸಂಭಾವನೆಯನ್ನು ಪರಿಷ್ಕರಿಸುವ ಕುರಿತು. | ಪಾಲಿಟೆಕ್ನಿಕ್‌ಗಳ ಉತ್ತರ ಪತ್ರಿಕೆ ಮೌಲ್ಯಮಾಪಕರಿಗೆ ಹಾಗೂ ಪರೀಕ್ಷಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವವರಿಗೆ ಸಂಭಾವನೆ ದರಗಳನ್ನು ಪರಿಷ್ಕರಿಸುವ ಬಗ್ಗೆ ಪ್ರಸ್ತಾವನೆಯು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುತ್ತದೆ ಎಂದು ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ತಿಳಿಸಿದರು. |
| 11 | **7703** | ಚು.ರ.ಪ್ರ: 84<br>ಶ್ರೀ ಮರಿತಿಬ್ಬೇಗೌಡ<br>ವಿ.ಪ.ನ.ದಿ:21.09.2020 | ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವ ಬಗ್ಗೆ. | ಭರ್ತಿ ಮಾಡಿಕೊಳ್ಳುವ ಕುರಿತಂತೆ ಆರ್ಥಿಕ ಇಲಾಖೆಯು ವಿಧಿಸಿದ ನಿರ್ಬಂಧಗಳು ತೆರವುಗೊಂಡ ನಂತರ ಬ್ಯಾಕ್‌ಲಾಗ್ |

| | | | | |
|---|---|---|---|---|
| | | | | ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.<br><br>ಪ್ರಸ್ತುತ, ತುಮಕೂರು ವಿಶ್ವವಿದ್ಯಾನಿಲಯದಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ ಖಾಲಿಯಿರುವ 82 ಹುದ್ದೆಗಳಿಗೆ ಮೀಸಲಾತಿಯನ್ನು ಸಿದ್ಧಪಡಿಸಿ ಅನುಮೋದನೆಗಾಗಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈ ಬಗ್ಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಮೋದನೆ ಪಡೆಯಲಾಗಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ಅನುಮೋದನೆ ಬಾಕಿ ಇದ್ದು, ಅನುಮೋದನೆ ದೊರೆತ ನಂತರ ನಿಯಮಾನುಸಾರ ನೇಮಕಾತಿಗೆ ಕ್ರಮವಹಿಸಲಾಗುವುದು ಎಂದು ಮಾನ್ಯ ಉಪ ಮುಖ್ಯಮಂತ್ರಿಗಳ ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ತಿಳಿಸಿದರು. |
| 12 | **7908** | ಚು.ರ.ಪ್ರ:198<br>ಡಾ|| ಕೆ.ಗೋವಿಂದ್ ರಾಜ್<br>ವಿ.ಪ.ನ.ದಿ:01.02.2021 | ಬೆಂಗಳೂರು ವಿಶ್ವವಿದ್ಯಾಲಯ ಪರೀಕ್ಷಾ ಉತ್ತರ ಪತ್ರಿಕೆಗಳ ಸ್ಕ್ಯಾನಿಂಗ್‌ಗಾಗಿ ಹೊರಗುತ್ತಿಗೆ ಪಡೆಯಲಾದ ಸಂಸ್ಥೆಯು ಅಕ್ರಮದಲ್ಲಿ ಭಾಗಿಯಾಗಿ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ ತಿದ್ದುಪಡಿ ಮಾಡಿರುವ ಬಗ್ಗೆ. | ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೆಪ್ಟೆಂಬರ್/ಅಕ್ಟೋಬರ್ 2020ರಲ್ಲಿ ಜರುಗಿದ ಸ್ನಾತಕ ಪದವಿ ಪರೀಕ್ಷೆಗಳ ಫಲಿತಾಂಶವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಸಂದರ್ಭದಲ್ಲಿ ಮೆ||ಟಿ.ಆರ್.ಎಸ್. ಫಾರಂ ಅಂಡ್ ಸರ್ವೀಸ್ ಪ್ರೈ.ಲಿ.ಚೆನ್ನೈ ಮತ್ತು ಬೆಂಗಳೂರು, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೆಲವು ಸಿಬ್ಬಂದಿಗಳಿಂದ 804 ಉತ್ತರ ಪತ್ರಿಕೆಗಳ ಅಂಕಗಳನ್ನು ತಿರುಚಿರುವುದಾಗಿ ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಸದರಿ ಸಂಸ್ಥೆಯ ಮೇಲೆ ವಿಶ್ವವಿದ್ಯಾನಿಲಯವು ದಿನಾಂಕ:03.01.2021 |

| | | | | |
|---|---|---|---|---|
| | | | | ರಂದು ಜ್ಞಾನಭಾರತಿ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತದೆ. ತಿರುಚಿರುವ ಬಗ್ಗೆ ತಾಂತ್ರಿಕ ತಜ್ಞ ಸಮಿತಿಯಿಂದ ತನಿಖೆ ನಡೆಸುವುದು, IT & Performance Audit by C & AG of India ದಿಂದ ಪರಿಶೋಧನೆ ನಡೆಸುವುದು ಮತ್ತು ಸದರಿ ತನಿಖೆಯನ್ನು ಸಿ.ಐ.ಡಿ.ಗೆ ವಹಿಸಲು ನಿರ್ಣಯಿಸಿ, ಪ್ರಕರಣವನ್ನು ತನಿಖೆಗಾಗಿ ಸಿ.ಐ.ಡಿ. ಗೆ ವಹಿಸಲು ಸರ್ಕಾರವನ್ನು ಕೋರಿರುತ್ತದೆ. ವಿಶ್ವವಿದ್ಯಾನಿಲಯದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು) ತಿಳಿಸಿದರು. |
| 13 | **7940** | ನಿಯಮ-330ರ ಅಡಿಯಲ್ಲಿ ಶ್ರೀ ಎನ್.ರವಿಕುಮಾರ್ ವಿ.ಪ.ನ.ದಿ:24.03.2021 | "ಬೆಂಗಳೂರು ನಗರ ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸರ್ವೆ ನಂ.63ರಲ್ಲಿನ 5 ಎಕರೆ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಇಸ್ಲಾಮಿಯಾ ಇನ್ಸ್ ಟಿಟ್ಯೂಟ್ ಆಫ್ ಟೆಕ್ನಾಲಜಿ, ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿರುವ ಕುರಿತು. | ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 104ರನ್ವಯ ಮೇಲ್ಕಂಡ ಸಂಸ್ಥೆಯು ಹುಳಿಮಾವು ಗ್ರಾಮದ ಸರ್ವೆ ನಂ.63 ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಪ್ರವೇಶಿಸಿರುವುದನ್ನು ಕೂಡಲೇ ತೆರವುಗೊಳಿಸಿ ಅಲ್ಲಿ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳನ್ನು ಮತ್ತು ಭೂಮಿಯನ್ನು ದಿನಾಂಕ:15.09.2020ರಂದು ಸರ್ಕಾರದ ಸ್ವಾಧೀನಕ್ಕೆ ಪಡೆಯಲು ಈ ಮೂಲಕ ಆದೇಶಿಸಿದೆ. ಇದಕ್ಕೆ ತಗಲುವ ವೆಚ್ಚವನ್ನು ಕರ್ನಾಟಕ ಭೂ ಕಂದಾಯ ಬಾಕಿ ಎಂಬುವುದಾಗಿ ಪರಿಗಣಿಸಿ ಒತ್ತುವರಿದಾರರಿಂದ ವಸೂಲಿ ಮಾಡಲು ಆದೇಶಿಸಿದೆ.<br><br>ಈ ಹಿನ್ನಲೆಯಲ್ಲಿ ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ನೀಡಿರುವ ಸಂಯೋಜನೆಯನ್ನು ಮುಂದುವರೆಸುವ |

| | | | | |
|---|---|---|---|---|
| | | | | /ರದ್ದುಗೊಳಿಸುವ ಬಗ್ಗೆ ದಿನಾಂಕ:03-03-2021ರಂದು ವಿಶ್ವೇಶ್ವರಯ್ಯ ಕಾಲೇಜಿಗೆ 2021-22ನೇ ಶೈಕ್ಷಣಿಕ ಸಾಲಿನಿಂದ ಸಂಯೋಜನೆಯನ್ನು ಮುಂದುವರೆಸುವ /ರದ್ದುಗೊಳಿಸುವ ಬಗ್ಗೆ ನಿಯಮಾನುಸಾರ ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ, ಐಟಿ&ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು ತಿಳಿಸಿದರು. |
| 14 | 7942 | ಚು.ಗು.ಪ್ರ.949<br>ಡಾ. ಚಂದ್ರಶೇಖರ ಬಿ ಪಾಟೀಲ್<br>ವಿ.ಪನ.ದಿ.15-03-2021 | ಗುಲ್ಬರ್ಗ ವಿಶ್ವವಿದ್ಯಾನಿಲಯ, ರಾಯಚೂರು ವಿಶ್ವವಿದ್ಯಾನಿಲಯ, ಕೃಷ್ಣದೇವರಾಯ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ಬಗ್ಗೆ. | ರಾಜ್ಯದಲ್ಲಿ ಕೋವಿಡ್-19 ರಿಂದ ಉಂಟಾದ ಪರಿಸ್ಥಿತಿಯ ಹಿನ್ನಲೆಯಲ್ಲಿ ಆರ್ಥಿಕ ಇಲಾಖೆಯ ಒಂದು ಸುತ್ತೋಲೆ ಇರುವ ಕಾರಣದಿಂದ ನೇಮಕ ಮಾಡುವಂಥದ್ದಕ್ಕೆ ತಡೆಯಿದೆ. ಆರ್ಥಿಕ ಇಲಾಖೆಯು ವಿಧಿಸಿರುವ ನಿರ್ಬಂಧಗಳನ್ನು ತೆರವುಗೊಳಿಸಿದ ನಂತರ ವಿಶ್ವವಿದ್ಯಾಲಯಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಆದಷ್ಟು ಶೀಘ್ರದಲ್ಲಿ ಭರ್ತಿ ಮಾಡುವಂತಹ ಕೆಲಸ ಮಾಡುತ್ತೇವೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಐಟಿ & ಬಿಟಿ ಸಚಿವರು ತಿಳಿಸಿದರು. |
| 15 | 8063 | ಸಭಾಪತಿಯವರ ಅನುಮತಿ ಮೇರೆಗೆ ಶ್ರೀ ಗೋವಿಂದರಾಜು<br>ವಿ.ಪ.ನ.ದಿ:23.09.2021 | ಕೋಲಾರದಲ್ಲಿರುವ ಸರ್ಕಾರಿ ಬಾಲಕರ ಕಾಲೇಜಿಗೆ ಮೂಲಸೌಲಭ್ಯವನ್ನು ಕಲ್ಪಿಸುವ ಬಗ್ಗೆ. | ಕೋಲಾರ ಜಿಲ್ಲೆಯ First Grade College ಗೆ ಬೇಕಾಗಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕಾಲೇಜಿಗೆ ಉತ್ತಮವಾದ ವ್ಯವಸ್ಥೆಯನ್ನು ಮಾಡಿಕೊಡಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. |
| 16 | 8064 | ಚು.ರ.ಪ್ರ: 863<br>ಶ್ರೀಎಸ್.ಎಲ್.ಭೋಜೇಗೌಡ<br>ವಿ.ಪ.ನ.ದಿ:24.09.2021 | ಸರ್ಕಾರಿ ಪಾಲಿಟೆಕ್ನಿಕ್ ಉಪನ್ಯಾಸಕರ ವೇತನದ ಬಗ್ಗೆ ಹಾಗೂ AGP ಸೌಲಭ್ಯ | ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:04.12.2020ರಂದು ಎ.ಜಿ.ಪಿ. ಸೌಲಭ್ಯಗಳನ್ನು ಮಂಜೂರು [illegible] |

| | | | | |
|---|---|---|---|---|
| | | | [illegible] ಮಾಡಲು ಹೊರಡಿಸಿರುವ ಆದೇಶಕ್ಕೆ ತಡೆಯಾಜ್ಞೆ ಬಂದಿರುವುದರಿಂದ [illegible] ವರ್ಷಗಳ ನಂತರವೂ ಒಂದೂ ವೇತನ ಬಡ್ತಿ ಪಡೆಯಲಾಗದ ಉಪನ್ಯಾಸಕರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳ ಬಗ್ಗೆ. | ಸರ್ಕಾರವು ಹೊರಡಿಸಿರುವ ಆದೇಶ ಸಂಖ್ಯೆ:ಇಡಿ 167 ಡಿಟಿಇ 2017, ದಿನಾಂಕ: 10.11.2020ಕ್ಕೆ ತಡೆಯಾಜ್ಞೆ ನೀಡಿರುವುದರಿಂದ ಮಾನ್ಯ ನ್ಯಾಯಾಲಯವು ತಡೆಯಾಜ್ಞೆಯನ್ನು ತೆರವುಗೊಳಿಸಿದ ನಂತರ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು ತಿಳಿಸಿದರು. |
| 17 | 8065 | ಚು.ಗು.ಪ್ರ: 875<br>ಶ್ರೀ ಮರಿತಿಬ್ಬೇಗೌಡ<br>ವಿ.ಪ.ನ.ದಿ:20.09.2021 | ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಗೌರವ ಸಂಬಾವನೆ ಪಾವತಿಸಲು ಕ್ರಮ ಕೈಗೊಳ್ಳುವ ಬಗ್ಗೆ. | ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಗೌರವ ಸಂಭಾವನೆ ಪಾವತಿಸಲು ವೇತನೇತರ ಬಾಬ್ತಿನ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಅನುದಾನವನ್ನು ನಾಲ್ಕು ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡುವುದರಿಂದ. ಪ್ರತಿ ಕಂತಿನ ಅನುದಾನವನ್ನು ನಿಯಮಿತವಾಗಿ ಬಿಡುಗಡೆ ಮಾಡಲು ಹಾಗೂ ಬಿಡುಗಡೆಯಾದ ಕೂಡಲೇ ಮಾಹೆಯಾನ ಅತಿಥಿ ಉಪನ್ಯಾಸಕರಿಗೆ ಗೌರವ ಸಂಭಾವನೆ ಪಾವತಿಸಲು ಕ್ರಮವಹಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ತಿಳಿಸಿದರು. |
| 18 | 8066 | ಚು.ರ.ಪ್ರ: 876<br>ಶ್ರೀ ಮರಿತಿಬ್ಬೇಗೌಡ<br>ವಿ.ಪ.ನ.ದಿ:20.09.2021 | ಸರ್ಕಾರಿ ಹಾಗೂ ಅನುದಾನಿತ ಇಂಜಿನೀಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ | ದಿನಾಂಕ:04.12.2020ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ ಪಾಲಿಟೆಕ್ನಿಕ್/ಕಾಲೇಜುಗಳ ಬೋಧಕ |

| | | | | |
|---|---|---|---|---|
| | | | ಸಹಾಯಕ ಪ್ರಾಧ್ಯಾಪಕರಾಗಿ 10 ವರ್ಷಗಳ ಹಿಂದೆ ನೇಮಕಗೊಂಡಿರುವವರಿಗೆ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿದ್ದರೂ, ಸಿ.ಎ.ಎಸ್ ಅಡಿಯಲ್ಲಿ (ಕೆರಿಯರ್ ಅಡ್ವಾನ್ಸ್ ಮೆಂಟ್ ಸ್ಕೀಮ್) ಸ್ಥಾನಪನ್ನ ಬಡ್ತಿಯನ್ನು ನೀಡದಿರುವ ಬಗ್ಗೆ. | ಸಿಬ್ಬಂದಿಗಳಿಗೆ ಸಿಎಎಸ್ ಅಡಿಯಲ್ಲಿ ಸೌಲಭ್ಯಗಳನ್ನು ಮಂಜೂರು ಮಾಡಲು ನಿಯಮಗಳನ್ನು ರೂಪಿಸಿರುವ 2012 ಎಐಸಿಟಿಇ ಸಿಎಎಸ್ ರೆಗ್ಯುಲೇಷನ್‌ನ್ನು ಅನುಷ್ಠಾನಗೊಳಿಸಿದ ಸರ್ಕಾರದ ಆದೇಶ ಸಂಖ್ಯೆ: ಇಡಿ 167 ಡಿಟಿಇ 2017, ದಿನಾಂಕ:10.11.2020ಕ್ಕೆ ತಡೆಯಾಜ್ಞೆ ನೀಡಲಾಗಿದೆ. ಮಾನ್ಯ ನ್ಯಾಯಾಲಯದಿಂದ ಅಂತಿಮ ತೀರ್ಪು ಬಂದ ನಂತರ ಸಿಎಎಸ್ ಅಡಿಯಲ್ಲಿ ಸೌಲಭ್ಯಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು ತಿಳಿಸಿದರು. |
| 19 | **8067** | ಚು.ಗು.ಪ್ರ: 27<br>ಶ್ರೀ ಅಡಗೂರು ಹೆಚ್.ವಿಶ್ವನಾಥ್<br>ವಿ.ಪ.ನ.ದಿ:13.09.2021 | ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ನೌಕರರುಗಳಿಗೆ ಸ್ಥಗಿತ ವೇತನ ಬಡ್ತಿಗಳನ್ನು 5 ರಿಂದ 8ಕ್ಕೆ ಹೆಚ್ಚಿಸುವ ಬಗ್ಗೆ. | ಸರ್ಕಾರದ ಪತ್ರ ಸಂಖ್ಯೆ: ಇಡಿ/172/ಯುಪಿಸಿ/2020(ಇ), ದಿನಾಂಕ: 06.08.2021 ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ರಾಜ್ಯ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ನೌಕರರುಗಳಿಗೆ ಸ್ಥಗಿತ ವೇತನ ಬಡ್ತಿಗಳನ್ನು 05 ರಿಂದ 08ಕ್ಕೆ ಹೆಚ್ಚಿಸಿದ್ದಲ್ಲಿ ಎಷ್ಟು ಆರ್ಥಿಕ ಹೊರೆಯಾಗುತ್ತದೆ ಎಂಬ ಬಗ್ಗೆ ಮಾಹಿತಿಯನ್ನು ಕೂಡಲೇ ಸಲ್ಲಿಸುವಂತೆ ಆಯುಕ್ತಾಲಯಕ್ಕೆ ಸೂಚಿಸಲಾಗಿರುತ್ತದೆ.<br><br>ಸದರಿ ಮಾಹಿತಿ ಸ್ವೀಕೃತಗೊಂಡ ನಂತರ ಈ ಕುರಿತು ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. |

| | | | | |
|---|---|---|---|---|
| 20 | **8148** | ಚು.ರ.ಪ್ರ: 27<br>ಶ್ರೀ ಮರಿತಿಬ್ಬೇಗೌಡ<br>ವಿ.ಪ.ನ.ದಿ:13.12.2021 | ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಪದವಿ ಹಾಗೂ ಇಂಜಿನಿಯರಿಂಗ್ ಕಾಲೇಜುಗಳು ಬೋಧಕರಿಗೆ ಯು.ಜಿ.ಸಿ/ಎ.ಐ.ಸಿ.ಟಿ.ಇ. 6ನೇ ಹಾಗೂ 7ನೇ ವೇತನ ಆಯೋಗದ ಪ್ರಕಾರ ವೇತನ ಬಾಕಿಯನ್ನು ಪಾವತಿಸುವ ಬಗ್ಗೆ. | ಕೇಂದ್ರ ಸರ್ಕಾರದ ಪಾಲಿನ ಅನುದಾನವನ್ನು ಬಿಡುಗಡೆ ಮಾಡಿದ ನಂತರ ಹಾಗೂ ರಾಜ್ಯ ಸರ್ಕಾರದ ಅನುದಾನ ಲಭ್ಯತೆಗನುಗುಣವಾಗಿ ಸದರಿ ವೇತನ ಬಾಕಿಯನ್ನು ಪಾವತಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ತಿಳಿಸಿದರು. |
| 21 | **8149** | ಸಭಾಪತಿಯವರ ಅನುಮತಿ ಮೇರೆಗೆ<br>ಶ್ರೀ ಅರುಣ ಶಹಾಪುರ<br>ವಿ.ಪ.ನ.ದಿ:14.12.2021 | ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳ ಸೇವೆಗೆ ಭದ್ರತೆ ನೀಡುವ ಕುರಿತು. | ಈ ವಿಷಯದ ಬಗ್ಗೆ ಚರ್ಚಿಸಲು ಈಗಾಗಲೇ ಸಭೆ ನಿಗದಿಯಾಗಿದೆ. ಸಭೆಯಲ್ಲಿ ಅದು ತೀರ್ಮಾನವಾಗುತ್ತದೆ ಎಂಬ ವಿಶ್ವಾಸ ನಮಗೆ ಇದೆ. ಇದನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತಂದು, ಇವತ್ತು ನಡೆಯುವ ನಾಲ್ಕು ಗಂಟೆಯ ಸಭೆಯಲ್ಲಿ ಇದಕ್ಕೆ ಒಂದು ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡುತ್ತೇವೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ಪರವಾಗಿ ತಿಳಿಸಿದರು. |
| 22 | **8150** | ಚು.ಗು.ಪ್ರ: 785<br>ಡಾ|| ತಳವಾರ್ ಸಾಬಣ್ಣ<br>ವಿ.ಪ.ನ.ದಿ:20.12 .2021 | ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಸಹ ಪ್ರಾಧ್ಯಾಪಕರಿಗೆ ಯು.ಜಿ.ಸಿ. ನಿಯಮಾನುಸಾರ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ. | ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರುಗಳಿಗೆ ಮೊಟ್ಟ ಮೊದಲನೇ ಬಾರಿಗೆ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುತ್ತಿದ್ದು, ಈಗಾಗಲೇ 09 ವಿಷಯಗಳಲ್ಲಿ ಸಂದರ್ಶನವನ್ನು ನಡೆಸಲಾಗಿದ್ದು, ಉಳಿದ ವಿಷಯಗಳಿಗೆ ನಿಯಮಾನುಸಾರ ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ನಡೆಸಲು ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>ಯು.ಜಿ.ಸಿ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಅರ್ಹರಿರುವ ಸಹ |

| | | | | |
|---|---|---|---|---|
| | | | | ಪ್ರಾಧ್ಯಾಪಕರುಗಳಿಗೆ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ವೃತ್ತಿ ಪದೋನ್ನತಿಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಅವರ ಅರ್ಹತಾ ದಿನಾಂಕಕ್ಕೆ ಪರಿಗಣಿಸಿ ಪ್ರಾಧ್ಯಾಪಕರ ಹುದ್ದೆಗೆ ವೃತಿ ಪದೋನ್ನತಿ ನೀಡಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ, ಐ.ಟಿ.-ಬಿ.ಟಿ.ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ತಿಳಿಸಿದರು. |
| 23 | **8151** | ಚು.ರ.ಪ್ರ: 851<br>ಶ್ರೀ ನಿರಾಣಿ ಹಣಮಂತ್ ರುದ್ರಪ್ಪ<br>ವಿ.ಪ.ನ.ದಿ:20.12 .2021 | ರಾಜ್ಯಲದಲಿ ಸರ್ಕಾಋದ ಅನುದಾನದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಪಕರ ಹುದ್ದೆ ಹಾಗೂ ಬೋಧಕೇತರ ಹುದ್ದೆಗಳನ್ನು ನೇರ ನೇಮಕಾತಿ ಮಾಡಲು ಸರ್ಕಾಋ ಕೈಗೊಂಡ ಕ್ರಮಗಳ ಬಗ್ಗೆ. | ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲ ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಇಡಿ 136 ಯುಎ 2017, ಬೆಂಗಳೂರು 03.06.2019ರಲ್ಲಿ ಆದೇಶ ಹೊರಡಿಸಲಾಗಿದೆ.<br><br>ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯಗಳು ಈಗಾಗಲೇ ರಚಿಸಿಕೊಂಡಿರುವ ಪರಿನಿಯಮಾವಳಿಗಳನ್ವಯ/ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇಮಕಾತಿ ಮಾಡಲಾಗುತ್ತಿದೆ.<br><br>ಪ್ರಸ್ತುತ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಸ್ 2020, ದಿನಾಂಕ: 06.07.2020 ರಲ್ಲಿ ವಿಧಿಸಿರುವ ಆರ್ಥಿಕ ನಿರ್ಬಂಧದನ್ವಯ ಕಲ್ಯಾಣ ಕರ್ನಾಟಕ ಪ್ರದೇಶಗಳನ್ನು ಹೊರತೆ ಪಡಿಸಿ ನೇರ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ. ಆರ್ಥಿಕ ನಿರ್ಬಂಧಗಳು ತೆರವುಗೊಂಡ ನಂತರ ಈ ಬಗ್ಗೆ ವಿಶ್ವವಿದ್ಯಾನಿಲಯಗಳಿಗೆ ಸದರಿ ಹುದ್ದೆಗಳನ್ನು |

| | | | | |
|---|---|---|---|---|
| | | | | ಭರ್ತಿ ಮಾಡಲು ನಿಯಮಾನುಸಾರ ಕ್ರಮಕೈಗೊಳ್ಳುವಂತೆ ತಿಳಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ, ಐಟಿ, ಬಿಟಿ,, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ತಿಳಿಸಿದರು. |
| 24 | **8152** | ಶೂನ್ಯ ವೇಳೆ ಪ್ರಸ್ತಾಪ<br>ಡಾ\|\|ತಳವಾರ್ ಸಾಬಣ್ಣ<br>ವಿ.ಪ.ನ.ದಿ:21.12 .2021 | ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿಯಾಗಿ ಕನಿಷ್ಟ ರೂ.150.00 ಕೋಟಿಗಳ ಅಭಿವೃದ್ಧಿ ಅನುದಾನವನ್ನು ಒದಗಿಸುವ ಬಗ್ಗೆ. | ಕೋವಿಡ್-19ರ ಹಿನ್ನಲೆಯಲ್ಲಿ ಹಣಕಾಸಿನ ಕೊರತೆ ಇರುವುದರಿಂದ ಮೇಲ್ಕಂಡ ಕಾಮಗಾರಿಗಳನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸುವ ಷರತ್ತಿನೊಂದಿಗೆ ಒಪ್ಪಿಗೆ ನೀಡಲಾಗಿದ್ದು, ಹಂತ ಹಂತವಾಗಿ ಇತರೆ ಹೆಚ್ಚಿನ ಅಧ್ಯಯನ ವಿಭಾಗಗಳನ್ನು ತೆರೆಯುವ ಅನುಮತಿ ನೀಡುವ ಬಗ್ಗೆ ಹಾಗೂ ಅಗತ್ಯವಿರುವ ವಿದ್ಯಾರ್ಥಿ ವಸತಿ ನಿಲಯಗಳು, ವಿದ್ಯಾರ್ಥಿನಿಯರ ವಸತಿ ನಿಅಯಗಳು, ನೌಕರರರ ವಸತಿ ಗೃಹಗಳು, ವಿಶ್ವವಿದ್ಯಾಲಯದ ಅಧಿಕಾರಿಗಳ ನಿವಾಸಗಳು, ಸಾರ್ವಜನಿಕ ಸೇವೆಗಳ ಕಟ್ಟಡ ಸಂಕೀರ್ಣ , ಎನ್.ಎಸ್.ಎಸ್. ಭವನ, ಅಂಚೆ ಕಚೇರಿ, ಬ್ಯಾಂಕ್, ಆಸ್ಪತ್ರೆ ಇತ್ಯಾದಿಗಳ ಕಟ್ಟಡಗಳಿಗೆ ಅಗತ್ಯತೆ ಮತ್ತು ಅನುದಾನದ ಲಭ್ಯತೆ ಆಧರಿಸಿ ವಿಶ್ವವಿದ್ಯಾಲಯದ ಕೋರಿಕೆ ಆಧರಿಸಿ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ತಿಳಿಸಿದರು. |
| 25 | **8153** | ನಿಯಮ-72<br>ಶ್ರೀ ಅ.ದೇವೇಗೌಡ<br>ವಿ.ಪ.ನ.ದಿ:24.12.2021 | ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಸೇವಾ ಭದ್ರತೆ ಹಾಗೂ ಇತರೆ ಅರ್ಹ ಸೌಲಭ್ಯಗಳನ್ನು | ಅತಿಥಿ ಬೋಧಕರುಗಳ ಹಿತದೃಷ್ಠಿಯಿಂದ ,ಕಾಲೇಜು ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ವೇತನ ಹೆಚ್ಚಳ ಹಾಗೂ ಇತರೆ ಬೇಡಿಕೆಗಳಿಗೆ |

| | | | | |
|---|---|---|---|---|
| | | | ಕಲ್ಪಿಸುವ ಕುರಿತು. | ಸಂಬಂಧಿಸಿಂತೆ ಅಧ್ಯಯನ ನಡೆಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 242 ಡಿಸಿಇ 2021, ದಿನಾಂಕ:15.12.2021 ರಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಈ ಬಗ್ಗೆ ವಿವರವಾದ ವರದಿಯನ್ನು ಒಂದು ತಿಂಗಳೊಳಗಾಗಿ ನೀಡುವಂತೆ ತಿಳಿಸಲಾಗಿದ್ದು, ಅದರಂತೆ ಮುಂದಿನ ಕ್ರಮ ವಹಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ತಿಳಿಸಿದರು. |
| | | | | |
| | | | | |